ದಕ್ಷಿಣ ಕನ್ನಡ ಜಿಲ್ಲೆಯ ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನೊದಗಿಸುವುದು.

೬೮೯. ಶ್ರೀ ಬಿ. ಎಂ. ಇದ್ದಿನಬ್ಬ (ಉಳ್ಳಾಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದ ಹೊಸ ಯೋಜನೆಯಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಉಚಿತ ಪಠ್ಯಪುಸ್ತಕಗಳನ್ನು ಈವರೆಗೆ ಎಷ್ಟು ನಿಗದಿಪಡಿಸಲಾಗಿದೆ, ಹಾಗೂ ೧೯೮೫ರ ಜೂನ್ ಅಖೈರವರೆಗೆ ಎಷ್ಟು ಪುಸ್ತಕಗಳನ್ನು ಒದಗಿಸಿ ಕೊಡಲಾಗಿದೆ ?

ಆ) ಜಿಲ್ಲೆಯಲ್ಲಿ ಈ ಉಚಿತ ಪಠ್ಯಪುಸ್ತಕಗಳ ವಿತರಣೆ ಸರಿಯಾಗಿ ನಡೆದಿದೆಯೆ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ದೂರುಗಳು ಬಂದಿದೆಯೇ ?

ಇ) ಈ ಪುಸ್ತಕಗಳು ಯಾವ ಯಾವ ಶಾಲೆಗಳಿಗೆ ಎಷ್ಟನೇ ತರಗತಿಗಳವರೆಗೆ ಹಂಚಲಾಗುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ)

ಬೇಕಾಗಿರುವ ಪುಸ್ತಕಗಳ ಸಂಖ್ಯೆ	೧೯೮೫ ಜೂನ್ ಆಖೈರ್ ವರೆಗೆ ಒದಗಿಸಲಾದ ಪುಸ್ತಕಗಳ ಸಂಖ್ಯೆ
೧೪,೭೧,೬೦೯	೧೧,೦೩,೭೬೬

ಆ) ಹೌದು. ಸರಿಯಾಗಿ ನಡೆದಿದೆ.

ಇ) ಸರ್ಕಾರಿ ಪ್ರಾಥಮಿಕ ಶಾಲೆಗಳು, ಕಾರ್ಪೋರೇಷನ್ ಪ್ರಾಥಮಿಕ ಶಾಲೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತಿರುವ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ೧ ರಿಂದ ೭ನೇಯ ತರಗತಿಯವರೆಗಿನ ಮಕ್ಕಳಿಗೆ ಈ ಪುಸ್ತಕಗಳನ್ನು ಹಂಚಲಾಗುವುದು.

ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಶಿಸ್ತು ನಿಯಂತ್ರಣ ಕಾರ್ಯ

೬೯೫. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಶಿಸ್ತು ನಿಯಂತ್ರಣ ಕಾರ್ಯವನ್ನು ಸಂಸ್ಥೆಗಳ ಆಡಳಿತ ನಿರ್ವಹಿಸುತ್ತಿರುವವರು ಯಾರು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಆಯಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ನಿರ್ವಹಿಸುತ್ತಿರುವರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಸೇನಾ ನಿಗಮದಿಂದ ನಡೆದ ಕಾಮಗಾರಿಗಳು

೬೬೧. ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

೧. ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಸೇನಾ ನಿಗಮ ಕೆಲಸ ಪ್ರಾರಂಭಿಸಿ ಎಷ್ಟು ವರ್ಷಗಳಾದವು ?

೨. ಭೂ ಸೇನಾ ನಿಗಮ ಕೆಲಸ ನಿರ್ವಹಿಸಲು ಯಾವ ಯಾವ ಯೋಜನೆ ಅಡಿಯಲ್ಲಿ ಈವರೆಗೆ ಹಣ ಪಡೆಯಲಾಗಿದೆ ?

೩. ಭೂ ಸೇನಾ ನಿಗಮವು ಪ್ರಾರಂಭವಾದಂದಿನಿಂದ ಈವರೆಗೆ ಪ್ರತಿ ವರ್ಷ ಎಷ್ಟು ಹಣ ಖರ್ಚು ಮಾಡಲಾಗಿದೆ ?